**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 557 /2018**

**ಚಾಸಾ ಃ– 06 / ಪ್ರಾಸಾ ಃ– 04**

**ದಿನಾಂಕಃ 07.11.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು** ಃ– **ಶ್ರೀ. ಎನ್ ಕೆ** ವಕೀಲರಿಂದ **ಆರೋಪಿಗಳ** ಪರವಾಗಿ ಃ–

1ನೇ ಆರೋಪಿಯು ದಿನಾಂಕ 25.10.2017 ರಂದು ಸಿಸಿ ನಂ.260/2016 ರ ಪ್ರಕರಣದಲ್ಲಿ ಹಾಜರಾಗಲು ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದುದಾರರು 1 ನೇ ಆರೋಪಿಯ ಪತ್ನಿ ಎಂದು ಹೇಳಿದ್ದು ನೀವು ಆ ಸಂಬಂಧ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗಳು ಗಲಾಟೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದು ನೀವು ನೋಡಿರುವುದಿಲ್ಲ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. 12.30 ಗಂಟೆಯ ಸಮಯದಲ್ಲಿ ನ್ಯಾಯಾಲಯದ ಮುಂಭಾಗ ಗಲಾಟೆ ನಡೆಯುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಕಟ್ಟಡದ ಒಳಗಡೆಯು ಗಲಾಟೆ ನಡೆದಿರುವುದಿಲ್ಲ ಎಂದರೆ ಸಾಕ್ಷಿ ನಡೆದಿರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಕಟ್ಟಡದ ಒಳಗಡೆ ಗಲಾಟೆ ನಡೆದಿರುತ್ತದೆ ಎಂದು ನೀವು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ಚಾಸಾ– 1ರವರ ಕೈಗಳನ್ನು ಹಿಡಿದುಕೊಂಡಿದ್ದರು ಎಂದು ಹೇಳಿದ್ದು ಯಾವ ಕೈಗಳಿಂದ

ಹಿಡಿದುಕೊಂಡಿದ್ದರು ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಯಾವ ಕೈಗಳಿಂದ ಎಂದು ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿಯು ಯಾವ ಕೈಗಳಿಂದ ಚಾಸಾ-1ರವರ ಕುತ್ತಿಗೆಗೆ ಹಾಕಿದ್ದರು ಎಂದು ನೀವು ನಿರ್ಧಿಷ್ಟವಾಗಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಪ್ರಕರಣಕ್ಕೆ ಹಾಜರಾಗಲು ನ್ಯಾಯಾಲಯದ ಹೊರಗಡೆ ನಿಂತಿದ್ದರು ಅವರು ಚಾಸಾ- 1ರವರಿಗೆ ಯಾವುದೇ ರೀತಿಯಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹಲ್ಲೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ಹಲ್ಲೆ ಮಾಡದಿದ್ದರೂ ಚಾಸಾ-1 ಮತ್ತು 4ರವರ ಉತ್ತೇಜನದಿಂದ ಆರೋಪಿಗಳನ್ನು ನ್ಯಾಯಾಧೀಶರ ಬಳಿ ಕರೆದುಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1,4 ಮತ್ತು ನೀವು ಪೂರ್ವಯೋಜಿತವಾಗಿ ಘಟನೆ ಮಾಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಗಲಾಟೆ ಮಾಡಿರುವುದಿಲ್ಲ ಬೇರೊಂದು ಪ್ರಕರಣದಲ್ಲಿ ಹಾಜರಾಗಲು ಬಂದಿದ್ದರು ಎಂದರೆ ಸಾಕ್ಷಿ ಗಲಾಟೆ ಮಾಡಿರುವುದು ನಿಜ ಇರುತ್ತದೆ ಆದರೆ ಅವರು ಬೇರೆ ಪ್ರಕರಣಕ್ಕೆ ಹಾಜರಾಗಲು ಬಂದಿರುವುದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂಭಾಗ ಹಾಗೂ ನ್ಯಾಯಾಲಯದ ಆವರಣದಲ್ಲಿ ಯಾವುದೇ ಗಲಾಟೆ ಆಗದಿದ್ದರೂ ಸಹ ಚಾಸಾ-1ರವರಿಗೆ ಸಹಾಯಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1ರವರು ವಕೀಲರನ್ನು ನೋಡಲು ಬಂದಿದ್ದರು ಎಂದು ಹೇಳಿದ್ದು ನಿಮಗೆ ಮೊದಲೆ ಮಾಹಿತಿ ಇತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸ-1ರವರು ವಕೀಲರನ್ನು ನೋಡಲು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದು ಚಾಸಾ-1ರವರು ಪೂರ್ವಯೋಜಿತವಾಗಿ ಗಲಾಟೆ ಮಾಡಲು ಬಂದಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಗಳು ಚಾಸಾ–1 ರವರ ಯಾವ ಕೈಯನ್ನು ಹಿಡಿದಿದ್ದರು ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಚಾಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುವುದಿಲಲ ನೀವು ಚಾಸಾ–1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**